INDIAN JOURNAL OF HISTORY AND ARCHAEOLOGY
ISSN (e):2582-225Xwww.ijha.in
Vol-6, Issue -5, September--October, 2024,
PageNo,27-37
Peer -Reviewed, Refereed Journal

# ಬಸವರಾಜ ಸಬರದ ಅವರ ಕಾವ್ಯದಲ್ಲಿ ಪ್ರಭುತ್ವ ವಿರೋಧಿ ನೆಲೆಗಳು

ಸಂಜಯ್ ಕುಮಾರ್.[1]
ಪ್ರೊ. ಷಹಸೀನಾ ಬೇಗಂ.[2]

ರಾಜಕೀಯ ಸಮಾಜದ ಅವಿಭಾಜ್ಯ ಅಂಗ. ಒಂದು ಸಮಾಜ ರೂಪಗೊಳ್ಳುತ್ತಿರುವಾಗಲೆ ಅದರ ಹಿಂದೆ ಒಂದು ರಾಜಕೀಯತತ್ವ ಕೆಲಸ ಮಾಡುತ್ತಿರುತ್ತದೆ. ಈ ರಾಜಕೀಯ ತತ್ವವೇ ಆ ಸಮಾಜದ ನೀತಿ ನಿಯಮಗಳನ್ನು, ಧೋರಣೆಗಳನ್ನು ನಿಯಂತ್ರಿಸುತ್ತದೆ. ಸಮಾಜ ರೂಪುಗೊಳ್ಳುವ ಆರಂಭದಲ್ಲಿ ಮನುಷ್ಯರೆಲ್ಲರ ಹಿತಾಸಕ್ತಿ ಮುಖ್ಯವಾಗಿರುತ್ತದೆ. ಆ ನಂತರದಲ್ಲಿ ಸಮಾಜದಲ್ಲಿ ಅಹಂ ಶ್ರೇಷ್ಠತೆಯ ಭಾವವೇ ಪ್ರಧಾನವಾಗುತ್ತದೆ. ಅದು ಮುಂದುವರೆದು ಸಮಾಜದ ಸಾಮಾಜಿಕ ಪರಿಕಲ್ಪನೆಗಳಾಗಿ, ಸಂಹಿತೆಗಳಾಗಿ ನಿರೂಪಿತವಾಗುತ್ತದೆ. ಇದೇ ಸಂದರ್ಭದಲ್ಲಿ ಸಮಾಜವನ್ನು ಆಳುವ ಪ್ರಭುತ್ವ ಕೂಡ ಅಂತಹ ಸಂಸ್ಕೃತಿ ಪರಿಕಲ್ಪನೆಗೆ ಬೆಂಬಲ ನೀಡುತ್ತದೆ. ಅದರ ವಕ್ತಾರನಾಗಿ ಕೆಲಸ ಮಾಡುತ್ತದೆ.

ಕನ್ನಡ ಸಾಹಿತ್ಯ ಪರಂಪರೆಯಲ್ಲಿ ಪ್ರಭುತ್ವವನ್ನು ಕುರಿತಂತೆ ಕಾವ್ಯ ತನ್ನ ನಿಲುವನ್ನು ಸ್ಪಷ್ಟ ಪಡಿಸುತ್ತಲೇ ಬಂದಿವೆ. ಪಂಪ ಆಸ್ಥಾನ ಕವಿಯಾಗಿದ್ದು ಪ್ರಭುತ್ವದ ಬಗ್ಗೆ ಹಲವು ಬಾರಿ ನಿರ್ದಾಕ್ಷಿಣ್ಯದ ನಿಲುವನ್ನು ತೋರುತ್ತಾನೆ. ಅಲ್ಲಿಂದ ಮುಂದೆಯು ಆ ಗುಣ ಅನೇಕ ಕವಿಗಳ ಕಾವ್ಯದಲ್ಲಿ ವ್ಯಕ್ತವಾಗುತ್ತಲೇ ಬಂದಿದೆ. ವಚನಕಾರರು, ದಾಸರು, ತತ್ವಪದಕಾರರು ಇದಕ್ಕೆ ಸಾಕ್ಷಿ ಹೊರತಾಗಿಲ್ಲ. ಹಾಗೆಯೇ ಆಧುನಿಕ ಕಾವ್ಯ ಸಂದರ್ಭವನ್ನು ಗಮನಿಸುವುದಾದರೆ ಪ್ರಭುತ್ವದ ವಿರುದ್ಧ ದನಿಯೆತ್ತುವ, ನಿರಂಕುಶ ಪ್ರಭುತ್ವದ ವಿರುದ್ಧ ದನಿ ಎತ್ತುವ ಮೂಲಕ ಪ್ರಜಾಪ್ರಭುತ್ವದೆಡೆಗೆ ಕೊಂಡೊಯ್ಯುವತ್ತ ತನ್ನ ಛಾಪನ್ನು ಮೂಡಿಸಿದೆ.

ನವೋದಯದಿಂದ ಆರಂಭವಾಗಿ ೭೦ರ ದಶಕದ ದಲಿತ ಬಂಡಾಯ ಪಂಥದವರೆಗೂ ಪ್ರಭುತ್ವದ ಬಗ್ಗೆ ಬಹಳ ದೊಡ್ಡ ಧ್ವನಿಯಿದೆ. ಇಂತಹ ಪ್ರಭಾವಕ್ಕೆ ಒಳಗಾದ ಬಸವರಾಜ ಸಬರದ ಅವರೂ ತಮ್ಮ ಕಾವ್ಯದಲ್ಲಿ ವ್ಯಂಗ್ಯ ಮತ್ತು ವಿಡಂಬನೆಯ ಮೂಲಕ ಪ್ರಭುತ್ವದ ವಿರುದ್ಧ ದನಿ ಎತ್ತಿದ್ದಾರೆ. ಎಡಪಂಥೀಯ ಚಿಂತಕರಾದ ಇವರು ಮಾರ್ಕ್ಸ್, ಗಾಂಧಿ ಲೋಹಿಯಾ, ಅಂಬೇಡ್ಕರ್‌ರವರ ಸಾಮಾಜಿಕ ಚಿಂತನೆಯನ್ನು ತಮ್ಮ ಬರೆಹದಲ್ಲಿ ಮೈಗೂಡಿಸಿ ಕೊಂಡಿದ್ದಾರೆ.

ಈ ನೆಲದ ರಾಜಕೀಯ ವ್ಯವಸ್ಥೆ, ಇಲ್ಲಿನ ಅನ್ಯಾಯ, ಅಧರ್ಮ, ಶೋಷಣೆಗಳನ್ನು ಕವಿ ವಾಸ್ತವದ ನೆಲಗಟ್ಟಿನಲ್ಲಿ ಚರ್ಚಿಸಿದ್ದಾರೆ. ಆ ಮೂಲಕ ರಾಜಕೀಯ ಲೋಪದೋಷಗಳ ವಿರುದ್ಧ ಬಂಡಾಯದ ದನಿ ಎತ್ತಿದ್ದಾರೆ. ಪ್ರಭುತ್ವದ ದಬ್ಬಾಳಿಕೆಗೆ ಒಳಗಾದ ಸಾಮಾನ್ಯ ಜನರ ಬದುಕಿನ ದುಸ್ಥಿತಿಯನ್ನು ಸಮಾಜದ

[1].ಸಂಶೋಧನಾ ವಿದ್ಯಾರ್ಥಿ, ಕನ್ನಡ ವಿಭಾಗ, ಮಹಾರಾಜ ಕಾಲೇಜು, ಮೈಸೂರು ವಿಶ್ವವಿದ್ಯಾನಿಲಯ ಮೈಸೂರು.

[2].ಪ್ರಾಧ್ಯಾಪಕರು, ಕನ್ನಡ ವಿಭಾಗ, ಮಹಾರಾಜ ಕಾಲೇಜು, ಮೈಸೂರು ವಿಶ್ವವಿದ್ಯಾನಿಲಯ ಮೈಸೂರು.

ಮುಂದಿದ್ದಾರೆ. ಪ್ರಭುತ್ವವನ್ನು ಪ್ರಶ್ನಿಸುವ ಇವರ ಕಾವ್ಯಗಳು ನೇರವಾಗಿ ಹೋರಾಟಕ್ಕೆ ಇಳಿಯುತ್ತವೆ. ಇವರ ಕಾವ್ಯದಲ್ಲಿ ಪ್ರಶ್ನೆಯಿದೆ. ವಿನಂತಿಯಿದೆ ಹಾಗೂ ಹೋರಾಟದ ಎಚ್ಚರಿಕೆಯಿದೆ.

ಇಂದಿನ ರಾಜಕಾರಣಿಗಳ ಭ್ರಷ್ಟತೆ ಕುರಿತು ಹೇಳುತ್ತಾ,

**"ವಿಭಿನ್ನ ತರಗತಿಯ**
**ಹಲ್ಕಟ್ಟಗಿರಿಗಳ**
**ವಿಶ್ವಕೋಶ**
**ಸುಳ್ಳಿಗೆ**
**ಸತ್ಯದ ಸೆರಗು ಹೊದಿಸಿ**
**ಊರಗರತಿ ಮಾಡುವ**
**ಹೆಬ್ಬಟ್ಟಿನ ಗಣಿಯರ**
**ಗರಡಿ ಮನೆ"**

ರಾಜಕೀಯ ವ್ಯವಸ್ಥೆಯ ವಿರುದ್ಧ ಕವಿ ತನ್ನ ಅಸಮಧಾನ ಹೊರಹಾಕಿದ್ದಾರೆ. ರಾಜಕಾರಣಿಗಳು ನೀಡುವ ಸುಳ್ಳು ಭರವಸೆಗಳನ್ನು ಕಟುವಾಗಿ ಟೀಕಿಸಿದ್ದಾರೆ. ಜ್ಞಾನದ ಅರಿವೆ ಇಲ್ಲದವರು ತಮ್ಮ ಹಣಬಲದಿಂದ ಇಂದು ಅಧಿಕಾರದ ಗದ್ದುಗೆ ಹಿಡಿಯುತ್ತಾ, ಜನಸಾಮಾನ್ಯರ ಮೇಲೆ ಅಧಿಕಾರ ಚಲಾಯಿಸುತ್ತಿದ್ದಾರೆ. ಸುಳ್ಳಿನ ವಿಶ್ವಕೋಶವೇ ಅವರ ಮುಂದಿದೆ. ರಾಜಕೀಯ ವ್ಯವಸ್ಥೆ ಇಂತಹವರನ್ನು ತಯಾರು ಮಾಡುವ ಗರಡಿಮನೆಯಂತೆ ಎಂದು ಕವಿ ನೇರವಾಗಿಯೇ ವ್ಯವಸ್ಥೆಯನ್ನು ಕೆಣಕುತ್ತಾರೆ. 'ಹಲ್ಕಟ್ಟಗಿರಿಗಳ ವಿಶ್ವಕೋಶ' ಎನ್ನುವಲ್ಲಿ ಇಂದಿನ ರಾಜಕಾರಣಿಗಳ ಜನ ವಿರೋಧಿ ನಿಲುವುಗಳ ಬಗೆಗೆ ಕವಿಗೆ ಆಕ್ರೋಶವಿದೆ. ವರ್ತಮಾನ ಸಂದರ್ಭದಲ್ಲಿ ರಾಜಕೀಯ ವ್ಯವಸ್ಥೆ ಮತ್ತಷ್ಟು ಕ್ರೂರವಾಗಿ ಉಲ್ಬಣಗೊಳ್ಳುತ್ತಿದ್ದು ಜನಸಾಮಾನ್ಯರು ಎಚ್ಚೆತ್ತುಕೊಳ್ಳುವ ಅನಿವಾರ್ಯಕತೆಯಿದೆ.

**"ನಮ್ಮ ನಾಯಕರು ಮಳೆರಾಯ**
**ಡೊಂಕು ಬಾಲದವರು ಮಳೆರಾಯ**
**ಬರಬಿದ್ದು ಜನರೆಲ್ಲಾ ಗುಳೆಕಟ್ಟಿ ನಡೆವಾಗ**
**ಅರಮನ್ಯಾಗ ವೈಭವ ಮಳೆರಾಯ**
**ಆ ಪಕ್ಷ ಬಂದೈತಿ ಮಳೆರಾಯ**
**ಈ ಪಕ್ಷ ಹೋಗೈತಿ ಮಳೆರಾಯ**
**ಯಾರ್ಯಾರೋ ಬಂದರು ಯಾರ್ಯಾರೋ ಹೋದರು**
**ನಮ್ಮ ಗೋಳು ತಪ್ಪಿಲ್ಲೋ ಮಳೆರಾಯ"**

ರಾಜಕಾರಣಿಗಳನ್ನು ಡೊಂಕು ಬಾಲದವರು ಎಂದು ಕವಿ ವ್ಯಂಗ್ಯಮಾಡಿದ್ದಾರೆ. ನಾಯಿಯ ಬಾಲ ಎಂದೂ ನೆಟ್ಟಾಗಾಗುವುದಿಲ್ಲ. ಹಾಗೆ ಯಾವ ಸರ್ಕಾರಗಳು ಅಧಿಕಾರಕ್ಕೆ ಬಂದರೂ ಈ ನೆಲದ ಬಡವರ, ಕಾರ್ಮಿಕರ, ರೈತರ ಗೋಳು ಬಗೆಹರಿಸುವುದಿಲ್ಲ ಎಂದು ಕವಿ ವಿಷಾದಿಸುತ್ತಾರೆ. ಪ್ರಸ್ತುತ ರಾಜಕೀಯ ವ್ಯವಸ್ಥೆಯ ಧೋರಣೆಯನ್ನು ಇಲ್ಲಿ ಅತ್ಯಂತ ನಿಷ್ಠುರವಾಗಿ ವಿಡಂಬಿಸಲಾಗಿದೆ. ಬರಗಾಲದಿಂದ ತತ್ತರಿಸುವ ಜನರ ಸಂಕಷ್ಟವನ್ನು ಕೇಳದ ಅಧಿಕಾರಶಾಹಿಗಳು ವೈಭವೋಪೇತ ಜೀವನ ನಡೆಸುತ್ತಿರುವುದು ಪ್ರಜಾಪ್ರಭುತ್ವ ವ್ಯವಸ್ಥೆಯ ದುರಂತವೇ ಸರಿ. ಒಪ್ಪತ್ತಿನ ಊಟಕ್ಕೂ ಪರದಾಡುವ ಜನರು ಒಂದು ಕಡೆಯಾದರೆ, ಅವರ ಕಲ್ಯಾಣದ ನೆಪದಲ್ಲಿ ವಿಲಾಸಿ ಜೀವನ ನಡೆಸುತ್ತಿರುವ ಭ್ರಷ್ಟ ರಾಜಕೀಯ ವ್ಯವಸ್ಥೆ ಮತ್ತೊಂದು ಕಡೆ. ಸಾಮಾಜಿಕ, ಆರ್ಥಿಕ ಅಸಮಾನತೆಗೆ ರಾಜಕೀಯವೇ ಕೇಂದ್ರ ಶಕ್ತಿಯಾಗಿ ಪರಿಣಮಿಸುತ್ತಿರುವುದು ದುರಂತದ ಸಂಗತಿ. ಚುನಾವಣಾ ಸಮಯದಲ್ಲಿ ಹುಸಿ

ಭರವಸೆಗಳನ್ನು ನೀಡುವ ರಾಜಕಾರಣಿಗಳನ್ನು ಕುರಿತು ಪ್ರತಿಫಲ ಎಂಬ ಕವಿತೆಯಲ್ಲಿ ಕವಿ ವ್ಯಂಗಮಾಡುತ್ತಾರೆ.

**"ಚುನಾವಣೆಯ ಸಮಯದಲ್ಲಿ**
**ಆತ ಗುಡುಗಾದ, ಮಿಂಚಾದ**
**ಹೊಳೆವ ನಕ್ಷತ್ರ ತರುತ್ತೇನೆಂದ**
**ನಗುವ ಚಂದ್ರನ ಕೊಡುತ್ತೇನೆಂದ**
**ಆರಿಸಿ ಬಂದ ಮೇಲೆ ಐದು ವರ್ಷ ನಾಪತ್ತೆಯಾದ**
**ಅಲ್ಲಿ ಚಂದ್ರನೂ ನಗಲಿಲ್ಲ, ನಕ್ಷತ್ರವೂ ಹಾಡಲಿಲ್ಲ"**

ರಾಜಕಾರಣಿಗಳ ನೈಜ ವ್ಯಕ್ತಿತ್ವವನ್ನು ಕವಿ ಬಯಲಿಗೆಳೆದಿದ್ದಾರೆ. ಚುನಾವಣೆಯ ಸಂದರ್ಭ ಬಂತೆಂದರೆ ಸಾಕು ರಾಜಕಾರಣಿಗಳು ಸುಳ್ಳು ಭರವಸೆಗಳ ಮೂಲಕ ಜನಸಾಮಾನ್ಯರನ್ನು ಬೆರಗುಗೊಳಿಸುತ್ತಾರೆ. ಅವರ ಮಾತುಗಳಿಂದ ಸಾಮಾನ್ಯರ ಬದುಕಿನಲ್ಲಿ ಹೊಸ ಕನಸು ಚಿಗುರುತ್ತದೆ. ಆದರೆ ಚುನಾವಣೆಯಲ್ಲಿ ಗೆದ್ದ ನಂತರ ತಮ್ಮ ಅಧಿಕಾರ ಮುಗಿಯುವ ತನಕ ಜನಸಾಮಾನ್ಯರನ್ನು ಮರೆತು ವಂಚನೆ ಮಾಡುತ್ತಾರೆ. 'ಅಲ್ಲಿನ ಚಂದ್ರನೂ ನಗಲಿಲ್ಲ, ನಕ್ಷತ್ರವೂ ಹಾಡಲಿಲ್ಲ' ಎಂಬ ಕವಿಯ ನುಡಿಯಲ್ಲಿ ವ್ಯಂಗ್ಯವಿದೆ. ಸಾಮಾನ್ಯ ಜನರ ಕನಸು ಬರಿ ಕನಸಾಗೇ ಉಳಿಯುತ್ತದೆ. ಕೇವಲ ಆಶ್ವಾಸನೆಗಳ ಮೂಲಕ ಜನರನ್ನು ಮರುಳುಮಾಡಿ ವಂಚಿಸುತ್ತಿರುವ ಇಂತಹ ಸಾಮಾಜಿಕ ವ್ಯವಸ್ಥೆಯೊಳಗೆ ಇಂದು ನಾವಿದ್ದೇವೆ. ಜನ ಸಾಮಾನ್ಯರು ಇಂತಹ ಸುಳ್ಳು ಆಶ್ವಾಸನೆಗಳಿಗೆ ಮರುಳಾಗದೆ ಜಾಗೃತರಾಗುವ ಅವಶ್ಯಕತೆ ವರ್ತಮಾನ ಸಮಾಜದಲ್ಲಿ ಅನಿವಾರ್ಯವಾಗಿದೆ.

ರಾಜಕಾರಣಿಗಳ ಅನ್ಯಾಯ, ಮೋಸ, ವಂಚನೆಯನ್ನು 'ಭಿನ್ನ' ಎಂಬ ಕವಿತೆಯಲ್ಲಿ ಸಬರದ ತೆರೆದಿಡುತ್ತಾರೆ.

**"ತನ್ನ ಮಾತು ಸೂರ್ಯ ಚಂದ್ರರಷ್ಟೇ ಸತ್ಯ**
**ಎಂದು ಭಾಷಣ ಮಾಡಿದ ರಾಜಕಾರಣಿ**
**ಸೂರ್ಯ ಮುಳುಗುವುದರೊಳಗೆ**
**ಸಾವಿರ ಸುಳ್ಳು ಹೇಳಿದ್ದ**
**ಚಂದ್ರ ಅರಳುವ ಮೊದಲೇ**
**ನೂರು ಮೋಸಮಾಡಿದ್ದ"**

ಎನ್ನುವಲ್ಲಿ ಜನರನ್ನು ವಂಚಿಸುವುದರಲ್ಲಿ ರಾಜಕಾರಣಿಗಳು ಎಷ್ಟು ನಿಪುಣರು ಎಂಬ ವಿಡಂಬನೆ ಅಡಗಿದೆ. ಆಣೆ ಭಾಷೆ ಇವು ಕೆಲವು ರಾಜಕಾರಣಿಗಳ ದೈನಂದಿನ ಸರಕುಗಳಾಗಿವೆ. ಅವರು ಸುಳ್ಳಿನ ಸಾಮ್ರಾಜ್ಯದ ಅಧಿಪತಿಗಳಾಗಿದ್ದಾರೆ. ಹುಸಿ ಆಶ್ವಾಸನೆಗಳ ಮೂಲಕ ಜನರನ್ನು ನಂಬಿಸಿ ಸತ್ಯವಂತರಂತೆ, ಪ್ರಾಮಾಣಿಕರಂತೆ ನಟಿಸುತ್ತಾರೆ. ಆದರೆ ಅಂತರಂಗದಲ್ಲಿ ಅವರು ಗೋಮುಖ ವ್ಯಾಘ್ರರು, ಅನ್ಯಾಯ, ಅತ್ಯಾಚಾರ, ಅಕ್ರಮಗಳಲ್ಲೇ ತಮ್ಮ ಬದುಕನ್ನು ಸಾಗಿಸುತ್ತಿರುತ್ತಾರೆ. ತನ್ನ ಮಾತು ಸೂರ್ಯ ಚಂದ್ರರಷ್ಟೇ ಸತ್ಯ ಎಂದು ಜನರನ್ನು ನಂಬಿಸುವ ಅವರು ಸಂಜೆಯಾಗುವುದರೊಳಗೆ ತಮ್ಮ ಮಾತಿಗೆ ವಿರುದ್ಧ ನಡೆದುಕೊಳ್ಳುವ ಮೂಲಕ ಅನಾಚಾರದಲ್ಲಿ ತೊಡಗುತ್ತಾರೆ. ಇಂತಹ ರಾಜಕಾರಣಿಗಳ ಬಣ್ಣದ ಮಾತುಗಳು, ಆಶ್ವಾಸನೆಗಳು ಸೂರ್ಯ ಚಂದ್ರರಿರುವವರೆಗೆ ಬರಿ ಮಾತಾಗಿಯೇ ಉಳಿಯುತ್ತವೆ ಎನ್ನುವುದನ್ನು ಇಲ್ಲಿನ ಕವಿತೆ ಪ್ರಸ್ತುತಪಡಿಸುತ್ತದೆ. ನುಡಿವುದೊಂದು ನಡೆಯುವುದು ಮತ್ತೊಂದು ಎಂಬ ಸಿದ್ಧಾಂತದಲ್ಲಿ ಬದುಕುತ್ತಿರುವ ರಾಜಕಾರಣಿಗಳು ವರ್ತಮಾನ ಸಮಾಜಕ್ಕೆ ಮಾರಕವಾಗಿದ್ದಾರೆ.

**"ಚುನಾವಣೆಯ ಮುಂಚೆ**
**ಮಲ್ಲಿಗೆ ಬಳ್ಳಿಯಂತೆ ನಳನಳಿಸುತ್ತಿದ್ದ**

**ಪಕ್ಕದ ಮನೆಯ ಪಾರೂ**
**ಪಂಚಾಯ್ತಿ ಅಧ್ಯಕ್ಷಳಾದ ಮೇಲೆ**
**ಕುಂಬಳಬಳ್ಳಿಯಂತೆ ಹಬ್ಬಿದಳು**
**ಊರನ್ನೇ ಆಕ್ರಮಿಸಿದಳು.**

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ರಾಜಕೀಯ ಎಂಬುದು ಹಳ್ಳಿಯಿಂದ ದಿಲ್ಲಿಯವರೆಗೂ ಹಬ್ಬಿದೆ. ಸ್ಥಳೀಯ ರಾಜಕಾರಣಿಗಳು ಚುನಾವಣೆಯ ಸಂದರ್ಭದಲ್ಲಿ ನಗುನಗುತ್ತ ತಮ್ಮ ಮುಗ್ಧತೆಯ ಮುಖವಾಡವನ್ನು ಹೊತ್ತು ಅಧಿಕಾರದ ಚುಕ್ಕಾಣಿ ಹಿಡಿಯುತ್ತಾರೆ. ಆ ಮೂಲಕ ನಿಧಾನವಾಗಿ ಇಡೀ ಹಳ್ಳಿಯನ್ನೇ ಆಕ್ರಮಿಸಿ ತಿಂದು ತೇಗುತ್ತಾರೆ ಎಂಬುದು ಕವಿಯ ಅಪವಾದ. ಹಳ್ಳಿಯಾದರೇನು? ದಿಲ್ಲಿಯಾದರೇನು? ರಾಜಕೀಯ ಒಂದೇ. ಹಾಗಾಗಿ ಅನ್ಯಾಯ ಅಕ್ರಮಗಳು ಎಲ್ಲಿಯಾದರೂ ಒಂದೇ ರೀತಿಯಲ್ಲಿ ನಡೆಯುತ್ತವೆ ಎಂಬ ಕವಿಯ ಅಭಿವ್ಯಕ್ತಿಯಲ್ಲಿ ಪ್ರಸ್ತುತ ಹದಗೆಟ್ಟ ರಾಜಕೀಯ ಪರಿಸ್ಥಿತಿಯ ಚಿತ್ರಣವಿದೆ. ಇತ್ತೀಚಿನ ದಿನಮಾನಗಳಲ್ಲಿ ರಾಜಕೀಯದಲ್ಲಿ ಭ್ರಷ್ಟಾಚಾರವೇ ಪ್ರಧಾನವಾಗಿದೆ. ಅಧಿಕಾರ ಸಾಮಾನ್ಯ ಜನರ ಬದುಕನ್ನು ಕಿತ್ತು ತಿನ್ನುತ್ತಿದೆ. ಇಂತಹ ವ್ಯವಸ್ಥೆ ಬದಲಾಗುವ ಮೂಲಕ ಸ್ವಸ್ಥ ಸಮಾಜದ ನಿರ್ಮಾಣವಾಗಬೇಕು ಎಂಬ ಹಂಬಲ ಸಬರದ ಅವರಲ್ಲಿದೆ.

ತಮ್ಮ ರಾಜಕೀಯ ದಾಳಕ್ಕೆ ಜಾತಿಯನ್ನು ಅಸ್ತ್ರವಾಗಿ ಬಳಸಿಕೊಳ್ಳುತ್ತಿರುವ ರಾಜಕಾರಣಿಗಳ ನಡೆಯಲ್ಲಿ ಕವಿಗೆ ಬೇಸರವಿದೆ.

**"ಜಾತ್ಯಾತೀತ ರಾಷ್ಟ್ರವೆನ್ನುವರು**
**ಜಾತಿ ಬಲದಿಂದ ಬದುಕುವರಯ್ಯಾ**
**ಭಾವೈಕ್ಯತೆಯ ಮಾತು ಹೇಳುವರು**
**ಏಕತೆಯನ್ನು ಕಾಣರಯ್ಯ**
**ಸಮಾನತೆಯ ಭಾಷಣ ಮಾಡುವವರು**
**ಸೊಕ್ಕಿನಿಂದಲೇ ಮೆರೆಯುವರಯ್ಯಾ**
**ಹನಿಸುವ ಮೋಡ ಹೂ ಮುಡಿದಗಿಡ**
**ಮಾತನಾಡುವುದಿಲ್ಲ ನೋಡಾ**
**ಸಬರದ ಬಸವ"**

ಭಾರತ ಒಂದು ಜಾತ್ಯಾತೀತ ರಾಷ್ಟ್ರ. ಇಲ್ಲಿ ಯಾವುದೇ ಜಾತಿ, ಧರ್ಮ ಮುಖ್ಯವಾಗುವುದಿಲ್ಲ. ಎಲ್ಲವೂ ಸಮಾನತೆಯ ತತ್ವದಡಿ ನೆಲೆಗೊಂಡಿವೆ. ಸರ್ವಜನರು ಜಾತಿ ಧರ್ಮದ ಪರಿವೆಯಿಲ್ಲದೆ ಶಾಂತಿಯಿಂದ ಬದುಕು ನಡೆಸಬೇಕು ಎಂಬುದು ನಮ್ಮ ಸಂವಿಧಾನದ ಆಶಯ. ಆದರೆ ಇಂತಹ ಸಾಂವಿಧಾನಿಕ ಚೌಕಟ್ಟಿನಲ್ಲಿ ಅಧಿಕಾರ ಚಲಾಯಿಸುವ ರಾಜಕಾರಣಿಗಳು ಸಂವಿಧಾನದ ಆಶಯವನ್ನೇ ಗಾಳಿಗೆ ತೂರಿದ್ದಾರೆ. ಕೇವಲ ಭಾಷಣಗಳಲ್ಲಿ ಜ್ಯಾತ್ಯಾತೀತತೆ, ಭಾವೈಕ್ಯತೆ, ಸಮಾನತೆಯನ್ನು ಪ್ರತಿಪಾದಿಸುತ್ತಿದ್ದಾರೆ. ತಮ್ಮ ಸ್ವಾರ್ಥ ಸಾಧನೆಗೆ ಜಾತಿ–ಜಾತಿಗಳ ಮಧ್ಯೆ, ಧರ್ಮ ಧರ್ಮಗಳ ಮಧ್ಯೆ ವೈಮನಸ್ಸು ಸೃಷ್ಟಿಸುವ ಮೂಲಕ ಜನರಲ್ಲಿ ಕೋಮುಭಾವನೆಯನ್ನು ಹುಟ್ಟು ಹಾಕಲಾಗುತ್ತಿದೆ.

ವರ್ತಮಾನದ ಸಂದರ್ಭದಲ್ಲಿ ರಾಜಕೀಯ ಜಾತಿಕೇಂದ್ರಿತವಾಗಿದೆ. ಅದು ರಾಜಕೀಯವನ್ನು ನಿಯಂತ್ರಿಸುತ್ತಿದೆ. ರಾಜಕಾರಣಿಗಳು ಜಾತಿಯ ಬಲದಿಂದಲೇ ಅಧಿಕಾರದ ಗದ್ದುಗೆ ಹಿಡಿಯುತ್ತಿದ್ದಾರೆ. ಸಮಾನತೆಯ, ಸಾಮರಸ್ಯದ ಜೀವನ ನಡೆಸಲು ಜನರಿಗೆ ತಿಳಿ ಹೇಳಬೇಕಾದ ರಾಜಕೀಯ ವ್ಯವಸ್ಥೆಯೇ ಜಾತಿ–ಮತಧರ್ಮದ ಹಿಡಿತಕ್ಕೆ ಸಿಕ್ಕಿರುವುದು ಅಂತ್ಯಂತ ಶೋಚನೀಯ ಸಂಗತಿ. ಇಂತಹ ವ್ಯವಸ್ಥೆಯ ವಿರುದ್ಧ ಕವಿ ತಮ್ಮ ಅಸಹನೆಯನ್ನು ಹೊರಹಾಕಿದ್ದಾರೆ.

**"ಅವನು ರೈತ, ಕಷ್ಟಪಟ್ಟು ಬೆಳೆಯುತ್ತಾನೆ**
**ಇವನು ಕಾಮಿಕ, ನಿತ್ಯ ಬೆವರು ಸುರಿಸುತ್ತಾನೆ**
**ಅವನು ನೇಕಾರ ನಿತ್ಯ ನೆಯ್ದು ಬಟ್ಟೆ ತರುತ್ತಾನೆ**
**ಇವನು ಮೋಚಿ ಚರ್ಮ ಹೊಲಿದು ಚಪ್ಪಲಿ ಮಾಡುತ್ತಾನೆ**
**ಅವಳು ಗೃಹಿಣಿ ದಿನ ಅಡುಗೆ ಮಾಡುತ್ತಾಳೆ**
**ಇವಳು ಕೆಲಸದವಳು, ಮನೆ ಸ್ವಚ್ಚಗೊಳಿಸುತ್ತಾಳೆ**
**ಅವನು ರಾಜಕಾರಣಿ, ಇದನ್ನೆಲ್ಲವನ್ನು ಉಪಯೋಗಿಸುತ್ತಾನೆ**

ರೈತ, ಕಾರ್ಮಿಕ, ನೇಕಾರ, ಮೋಚಿ, ಗೃಹಿಣಿ, ಮನೆಕೆಲಸದವಳು ಇವರೆಲ್ಲ ಶ್ರಮಿಕ ವರ್ಗದವರು. ಇವರು ನಿಷ್ಠೆಯಿಂದ ತಮ್ಮ ಕಾಯಕಮಾಡುತ್ತ ಸ್ವಾಭಿಮಾನದ ಬದುಕನ್ನು ನಡೆಸುತ್ತಾರೆ. ಇವರಿಂದಲೇ ಸಮಾಜ ಇನ್ನು ಜೀವಂತವಾಗಿದೆ. ಇಡೀ ವಿಶ್ವವೇ ಒಂದಲ್ಲ ಒಂದು ರೀತಿಯಲ್ಲಿ ಇವರನ್ನು ಅವಲಂಬಿಸಿದೆ. ಇವರು ತಮ್ಮ ಕೆಲಸವನ್ನು ನಿಲ್ಲಿಸಿದರೆ ಜಗತ್ತು ವಿನಾಶದ ಹಾದಿ ಹಿಡಿಯುವುದು ಖಂಡಿತ. ಆದರೆ ರಾಜಕಾರಣಿಗಳು ಮಾತ್ರ ಶ್ರಮಿಕ ವರ್ಗದವರ ಎಲ್ಲಾ ಶ್ರಮವನ್ನು ಬಳಸಿಕೊಂಡು, ಅವಕಾಶವಾದಿಗಳಂತೆ ಸ್ವಾರ್ಥದ ಬದುಕನ್ನು ಸಾಗಿಸುತ್ತಾನೆ. ಸಾಮಾನ್ಯ ಜನರು ದುಡಿಯುವುದರಲ್ಲೇ ತಮ್ಮ ಆಯುಷ್ಯವನ್ನು ಕಳೆಯುತ್ತ ಕಷ್ಟದ ಬದುಕನ್ನು ಸಾಗಿಸುತ್ತಾರೆ. ಇಲ್ಲಿ ಶ್ರಮಿಕರ ಶ್ರಮಕ್ಕೆ ಯಾವುದೇ ಪ್ರತಿಫಲವಿಲ್ಲ. ಅಧಿಕಾರದ ಮದದಲ್ಲಿ ಮೆರೆಯುವ ರಾಜಕಾರಣಿಗಳು ಶ್ರಮವಹಿಸದೆ ಸುಖದ ಸುಪ್ಪತ್ತಿಗೆಯಲ್ಲಿ ಬದುಕುವ ಇಂತಹ ಅಸಮಾನ ರಾಜಕೀಯ ವ್ಯವಸ್ಥೆಯ ಬಗ್ಗೆ ಕವಿ ವಿಷಾದಿಸುತ್ತಾರೆ. ಈ ಕವಿತೆ ವಾಸ್ತವ ಸಮಾಜಕ್ಕೆ ತೀರ ಎನಿಸುತ್ತದೆ.

**"ರಾಜ ಮಹಾರಾಜ ವೈಭವ**
**ಕೊನೆಯ ತನಕ ಉಳಿಯಲಿಲ್ಲವಯ್ಯ**
**ಮಂತ್ರಿ ಮಾನ್ಯರ ದಬ್ಬಾಳಿಕೆ**
**ಬಹಳದಿವಸ ನಡೆಯಲಿಲ್ಲವಯ್ಯ**
**ನಾನು ನಾನೆಂದು ಬೀಗಿದವರೆಲ್ಲಾ**
**ಇಂದು ವಿಳಾಸವಿಲ್ಲದೆ ಹೋದರಯ್ಯ"**

ಇಲ್ಲಿ ಅಧಿಕಾರದ ಅಸ್ಥಿರತೆ ಎದ್ದು ಕಾಣುತ್ತದೆ. ಅಧಿಕಾರವೆಂಬುದು ಶಾಶ್ವತವಲ್ಲ, ಭಾರತದ ಚರಿತ್ರೆಯಲ್ಲಿ ವೈಭವೋಪೇತವಾಗಿ ಮೆರೆದ ಅದೆಷ್ಟೋ ಸಾಮ್ರಾಜ್ಯಗಳು, ರಾಜಮಹಾರಾಜರು ಹೇಳ ಹೆಸರಿಲ್ಲದಂತೆ ನಶಿಸಿಹೋಗಿದ್ದಾರೆ. ಐದು ವರ್ಷದ ಅಧಿಕಾರ ನಡೆಸುವ ಮಂತ್ರಿಗಳು ತಮ್ಮ ಅವಧಿ ಮುಗಿದ ನಂತರ ಆ ಜಾಗ ತೊರೆಯಬೇಕಾಗುತ್ತದೆ. ಯಾವುದು ಶಾಶ್ವತವಲ್ಲ, ರಾಜ್ಯಲಕ್ಷ್ಮೀ ಚಂಚಲ ಸ್ವಭಾವದವಳು ಎನ್ನುವ ಪಂಪನ ಮಾತು ಇದಕ್ಕೆ ಉತ್ತಮ ನಿದರ್ಶನ. ನಾನು ನಾನೆಂದು ಬೀಗುವುದರ ಬದಲು ಅಧಿಕಾರವನ್ನು ಜನ ಸಾಮಾನ್ಯರ ಕಷ್ಟಕ್ಕೆ ಸ್ಪಂದಿಸಲು ಬಳಸಿಕೊಳ್ಳಬೇಕು ಎಂದು ವರ್ತಮಾನದ ರಾಜಕಾರಣಿಗಳಿಗೆ ಸಬರದ ಅವರು ಕಿವಿ ಮಾತು ಹೇಳುತ್ತಾರೆ.

ರಾಜಕೀಯ ಪಕ್ಷಗಳು ಜನಸಾಮಾನ್ಯರನ್ನು ಹೇಗೆ ದಾರಿತಪ್ಪಿಸುತ್ತ ವಂಚನೆ ಮಾಡುತ್ತಿವೆ ಎಂಬುದನ್ನು 'ಕಾರ್ಗಿಲ್ ಮತ್ತು ಕವಿತೆ' ಎಂಬ ಕವನ ಕಟ್ಟಿಕೊಡುತ್ತಾರೆ.

**"ಮಂದಿರದಾಗ ಮಸೀದಿ ಇತ್ತು**
**ಮಸೀದಿಯಾಗ ಮಂದಿರ ಇತ್ತು**
**ಮಂದಿರ ಕೂಡಿಸಿದ್ರು ಮಸೀದಿ ಕೆಡವಿದ್ರು**
**ಮೇರ ಭಾರತ ಮಹಾನ್ ಅಂದ್ರು"**

ಇಲ್ಲಿ ವಾಸ್ತವ ರಾಜಕೀಯ ಚಿತ್ರಣವಿದೆ. ಧರ್ಮಗಳ ಹೆಸರಿನಲ್ಲಿ ಮತೀಯ ಕಲಹಗಳನ್ನು ಮೂಡಿಸುತ್ತ, ರಾಜಕಾರಣದ ತಿಕ್ಕಾಟಗಳು ನಡೆಸುತ್ತಲೇ 'ಮೇರಾ ಭಾರತ್ ಮಹಾನ್' ಎಂಬ ತೋರಿಕೆಯ ದೇಶಭಕ್ತಿಯನ್ನು ಇಂದಿನ ರಾಜಕೀಯ ಪಕ್ಷಗಳು ಪ್ರದರ್ಶಿಸುತ್ತವೆ. ಭಾರತದಂತಹ ಜ್ಯಾತ್ಯಾತೀತ ರಾಷ್ಟ್ರದಲ್ಲಿ ಇತ್ತೀಚಿನ ದಿನಗಳಲ್ಲಿ ಕೋಮುಗಲಭೆಗಳು ಸೃಷ್ಟಿಯಾಗುತ್ತಿರುವುದಕ್ಕೆ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ರಾಜಕೀಯ ಕೆಸರೆರಚಾಟವೇ ಕಾರಣ. ಮತೀಯವಾದ ಮಾನವ ಜನಾಂಗದ ವಿನಾಶಕ್ಕೆ ಕಾರಣವಾಗುತ್ತಿದೆ. ಮಂದಿರದಾಗ ಮಸೀದಿ ಇತ್ತು, ಮಸೀದಿಯಾಗ ಮಂದಿರ ಇತ್ತು. ಎನ್ನುವ ಕವಿಯ ಮಾತಿನಲ್ಲಿ ಚರಿತ್ರೆಯುದ್ದಕ್ಕೂ ಪ್ರಭುತ್ವ ಧಾರ್ಮಿಕ ಕಲಹಗಳಿಗೆ ಯಾವ ರೀತಿ ಪ್ರಾಶಸ್ತ್ಯ ಬಂದಿದೆ ಎಂಬುದನ್ನು ಕಾಣುತ್ತದೆ. ವರ್ತಮಾನ ಸಮಾಜದಲ್ಲಿ ಬಾಬ್ರಿ ಮಸೀದಿಯನ್ನು ಕೆಡವಿ ರಾಮಮಂದಿರ ನಿರ್ಮಿಸಿದ ಇಂದಿನ ರಾಜಕೀಯ ವ್ಯವಸ್ಥೆಗೆ ಈ ಉತ್ತಮ ಉದಾಹರಣೆಯಾಗಿದೆ.

ಕೆಲವು ರಾಜಕಾರಣಿಗಳ ಮುಖವಾಡದ ಬದುಕನ್ನು ಸಬರದ ಅವರು ವಂಚಕರು ಎಂಬ ಕವಿತೆಯಲ್ಲಿ ಪ್ರಸ್ತುತಪಡಿಸಿದ್ದಾರೆ.

**"ಹತ್ತು ತಲೆಯ ರಾವಣ**
**ನೀನು ಅಳಬೇಕಾದರೆ**
**ನಿನ್ನ ಇಪ್ಪತ್ತು ಕಣ್ಣುಗಳಿಂದ ಸುರವ ಕಣ್ಣೀರು**
**ಹರಿವ ಹಳ್ಳದಂತೆ ಕಾಣಬಹುದಲ್ಲ !**
**ಎಂದು ಒಬ್ಬ ಕೇಳಿದ**
**ಎಲವೋ ಮೂರ್ಖ**
**ರಾವಣರಾಜ್ಯದಲ್ಲಿ**
**ಪ್ರಜೆಗಳು ಅಳುತ್ತಾರೆಯೇ ಹೊರತು**
**ರಾವಣನೆಂದಿಗೂ ಅಳುವುದಿಲ್ಲ"**

ರಾಮಾಯಣದ ರಾವಣನಿಗೆ ಭ್ರಷ್ಟ ರಾಜಕಾರಣಿಗಳನ್ನು ಸಮೀಕರಿಸಿ ಹೇಳಲಾಗಿದೆ. ರಾವಣನಿಗೆ ಹತ್ತು ತಲೆಗಳು ಇತ್ತು ಎಂಬುದು ಪುರಾಣ ಕಲ್ಪಿತ ಕಟ್ಟುಕಥೆ. ಆದರೆ ಕವಿ ಹೇಳುವ ಭ್ರಷ್ಟ ರಾಜಕಾರಣಿಗಳಿಗೆ ಹತ್ತು ಮುಖಗಳ ಮನಸ್ಥಿತಿ ಇರುವುದು ಕಟು ಸತ್ಯ. ಅನ್ಯಾಯ, ಮೋಸ, ವಂಚನೆ, ಕಪಟ ಇತ್ಯಾದಿಗಳನ್ನು ಒಳಮನಸ್ಸಿನಲ್ಲಿ ತುಂಬಿಕೊಂಡ ರಾಜಕಾರಣಿಗಳು ನಿಜವಾದ ರಾವಣನರು. ರಾವಣ ರಾಜ್ಯದಲ್ಲಿ ಪ್ರಜೆಗಳು ಅಳುತ್ತಾರೆಯೇ ಹೊರತು ರಾವಣನಲ್ಲ ಎನ್ನುವ ಕವಿ ಮಾತಿನಲ್ಲಿ ವ್ಯಂಗವಿದೆ. ಪ್ರಸ್ತುತ ರಾಜಕಾರಣಿಗಳ ಮುಖವಾಡದ ಬದುಕನ್ನು ಇಲ್ಲಿ ಬಯಲಿಗೆಳೆಯಲಾಗಿದೆ. ರಾವಣನಿಗಿಂತ ಅತ್ಯಂತ ಕ್ರೂರ ಮನಸ್ಸಿನ ರಾಜಕಾರಣಿಗಳು ಇಂದಿನ ಸಾಮಾಜಿಕ ವ್ಯವಸ್ಥೆಯನ್ನು ತನ್ನ ಹಿಡಿತದಲ್ಲಿಟ್ಟುಕೊಂಡಿರುವುದು ಅತ್ಯಂತ ಅಪಾಯಕಾರಿ.

ಇಂದಿನ ರಾಜಕೀಯ ವ್ಯವಸ್ಥೆಯಲ್ಲಿ ಸಾಮಾನ್ಯ ಜನರ ಬದುಕಿನ ಸ್ಥಿತಿ ಹೇಗಿದೆ ಎಂಬುದನ್ನು ಕವಿ 'ರಾಜಕಾರಣ' ಎಂಬ ಕವಿತೆಯಲ್ಲಿ ಹೀಗೆ ಚಿತ್ರಿಸಿದ್ದಾರೆ.

**"ಅವರ ಜಂಡಾಕಿತ್ತು ಇವರ ಜಂಡಾ ಇಟ್ರು**
**ಅವರ ಪ್ಯಾಂಟ್ ಹರಿದು ಇವರ ಧೋತ್ರ ಇಟ್ರು**
**ಬಟ್ಟೆ ಬದಲಾದಿತು**
**ಬದುಕು ಮಾತ್ರ ಬದಲಾಗಲಿಲ್ಲ"**

ದೇಶವು ಬಡತನ, ನಿರುದ್ಯೋಗ, ಅನಕ್ಷರತೆ, ಅಜ್ಞಾನ, ಮೂಢನಂಬಿಕೆ ಮೊದಲಾದ ಸಮಸ್ಯೆಗಳಿಂದ ಬಳಲುತ್ತಿದೆ. ಮೂಲಭೂತ ಸೌಕರ್ಯಗಳ ಕೊರತೆಯಿಂದಾಗಿ ಜನರು ಪರಿತಪಿಸುವ ಸ್ಥಿತಿ ಎದುರಾಗಿದೆ. ಇಂತಹ ವ್ಯವಸ್ಥೆಯನ್ನು ತೊಡೆದುಹಾಕುವ ಜನರ ಕಲ,ಯಾಣ ಬಯಸಲು

ರಾಜಕಾರಣಿಗಳು ವಿಫಲರಾಗಿದ್ದಾರೆ. ಅವರು ತಮ್ಮ ಸ್ವಾರ್ಥ ಸಾಧನೆಗೆ ಜಾತಿ ಜಾತಿಗಳ ನಡುವೆ, ಧರ್ಮ ಧರ್ಮಗಳ ನಡುವೆ ಕಲಹ ಏರ್ಪಡಿಸುತ್ತಿದ್ದಾರೆ ಹೊರತು ಸಮಾಜದ ಅಭಿವೃದ್ಧಿಗೆ ಎಂದು ಶ್ರಮಿಸುತ್ತಿಲ್ಲ ಎನ್ನುವ ವಿಷಾದ ಕವಿಯನ್ನುಕಾಡಿದೆ.

**“ಪಂಚಾಯತಿ ಬಿಲ್ಡಿಂಗ್ ಉದ್ಘಾಟನಾ ಮಾಡಿ**
**ಸರ್ವಜ್ಞಪ್ಪ ಭಾಷಣಾ ಚಾಲು ಮಾಡಿದ**
**ಭಾಷಣದ ತುಂಬಾ ಸರ್ವಜ್ಞನ ವಚನ ಹೇಳಿದ**
**ಹಳ್ಳಿ ಮಂದೆಲ್ಲಾ ಈತನ**
**ಸರ್ವಜ್ಞ ಅಂತಾ ತಿಳಕೊಂಡ್ರು**
**ಭಾಷಣ ಮುಗದ ಮ್ಯಾಗ**
**ಹೆಂಗಾತಪಾ ಭಾಷಣ**
**ಅಂತ ನಮ್ಮೊಣ್ಯನ ಯಜಮಾನನ್ನ ಕೇಳಿದೆ**
**ಏನ್ರಿ ಭಾಷಣ ಮಾಡ ಮುಂದ**
**ಬರೇ ಗಬ್ಬ ವಾಸನೀನ ಬರುತ್ತಿತ್ತು**
**ಸರ್ವಜ್ಞ ಕುಡಿತಾನಂತ**
**ನಮಗ ಗೊತ್ತಿರಲಿಲ್ಲ ಬಿಡ್ರಿ ಅಂದ”**

ಎನ್ನುವಲ್ಲಿ ಇಂದಿನ ರಾಜಕೀಯ ವ್ಯವಸ್ಥೆ ವಿರುದ್ಧ ಕವಿಯ ವಿಡಂಬನೆಯಿದೆ. ಸರ್ವಜ್ಞ ಎಂದರೆ ಎಲ್ಲವನ್ನು ತಿಳಿದವನು, ಸತ್ಯವನ್ನು ಪ್ರತಿಪಾದಿಸುವವನು ಎಂದರ್ಥ. ಆದರೆ ಇಲ್ಲಿ ಮುಖವಾಡಧಾರಿಯಾದ ರಾಜಕಾರಣಿಗಳ ಬಾಯಲ್ಲಿ ಬರಿ ಸುಳ್ಳು ಭರವಸೆ, ಅನ್ಯಾಯ, ವಂಚನೆಗಳೇ ತುಂಬಿಕೊಂಡಿವೆ ಎಂದು ಕವಿ ಮಾರ್ಮಿಕವಾಗಿ ಹೇಳುತ್ತಾರೆ. ಮಂತ್ರಿಯ ಭಾಷಣದಲ್ಲಿ ಬರೆ ಗಬ್ಬುವಾಸನೆ ಬರುತ್ತಿತ್ತು ಎನ್ನುವ ಮೂಲಕ ರಾಜಕಾರಣಿಗಳ ಇನ್ನೊಂದು ಮುಖವನ್ನು ಬಯಲುಮಾಡುತ್ತಾರೆ. ‘ಗಬ್ಬುವಾಸನೆ ಎಂಬ ಕವಿಯ ಸೂಕ್ಷ್ಮತೆಯ ಭಾಷೆಯಲ್ಲಿ ಸ್ವಾರ್ಥ, ಭ್ರಷ್ಟಾಚಾರ, ಅನ್ಯಾಯದ ಪಾಲನೆ, ಸುಳ್ಳು ಭರವಸೆ ನಾಟಕೀಯ ಬದುಕಿನ ರಾಜಕಾರಣಿಗಳ ನೈಜ ಸ್ಥಿತಿಯನ್ನು ಅನಾವರಣ ಮಾಡಿದ್ದಾರೆ. ಇತ್ತೀಚಿನ ದಿನಗಳಲ್ಲಿ ಕೆಲವು ರಾಜಕಾರಣಿಗಳು ಹೆಂಡದ ಮತ್ತಿನಲ್ಲೆ ತಮ್ಮ ಜೀವನವನ್ನು ಕಳೆಯುತ್ತಿದ್ದಾರೆ. ಅವರಿಗೆ ಬಡಜನರ ನೋವು,ಯಾತನೆ ಎಂದೂ ಕಾಣುವುದಿಲ್ಲ. ಪ್ರಜೆಗಳಿಗೆ ಮಾದರಿಯಾಗಬೇಕಾದ ರಾಜಕಾರಣಿಗಳು ವಿಲಾಸದಲ್ಲಿ ಮೈಮರೆತಿರುವುದು ವಿಪರ್ಯಾಸವೇ ಸರಿ.

ಸಬರದ ಅವರು ವರ್ತಮಾನದ ಸಾಮಾಜಿಕ ಸಮಸ್ಯೆಗಳಿಗೆ ಸದಾ ಸ್ಪಂದಿಸುವ ಕವಿ ಅದಕ್ಕೆ ಸಾಕ್ಷಿಯೆನ್ನುವಂತೆ ‘ಬರಗಾಲದ ಹಾಡು ಕವಿತೆ’ ಯಲ್ಲಿ ಅವರು ಅಂದಿನ ಮುಖ್ಯಮಂತ್ರಿಗಳನ್ನು ನೇರವಾಗಿಯೇ ವಿರೋಧಿಸುತ್ತಾ

**“ರಾಮಣ್ಣ ಬಂದಾನ ಮಳೆರಾಯ**
**ಗುಂಡಣ್ಣ ಹೋಗ್ಯಾನ ಮಳೆರಾಯ**
**ಯಾರ್‍ಯಾರೋ ಬಂದಾರು ಯಾರ್‍ಯಾರೋ ಹೋದರು**
**ನಮ್ಮ ಗೋಳು ತಪ್ಪಿಲ್ಲ ಮಳೆರಾಯ”**

೧೯೭೦ ರ ದಶಕದ ರಾಜಕೀಯ ಚಿತ್ರಣವನ್ನು ಈ ಕವಿತೆ ಕಟ್ಟಿಕೊಡುತ್ತದೆ. ರಾಜ್ಯದಲ್ಲಿ ಬರಗಾಲ ಎದುರಾದ ಸಂದರ್ಭದಲ್ಲಿ ರೈತರ ಬದುಕಿನ ಸ್ಥಿತಿಯನ್ನು ಇದು ದರ್ಶಿಸುತ್ತದೆ. ಮೈಸೂರಿನಲ್ಲಿ ನಡೆದ ವಿಶ್ವ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಅಂದಿನ ಮುಖ್ಯಮಂತ್ರಿ ರಾಮಕೃಷ್ಣಹೆಗಡೆ ಮತ್ತು ಮಾಜಿ ಮುಖ್ಯಮಂತ್ರಿ ಗುಂಡುರಾವ್ ಅವರ ಸಮ್ಮುಖದಲ್ಲಿಯೇ ಸಬರದ ಅವರು ಈ ಕವಿತೆ ವಾಚಿಸುವುದರ ಮೂಲಕ ರಾಜಕೀಯ ವ್ಯವಸ್ಥೆ ವಿರುದ್ಧ ಪ್ರತಿರೋಧವನ್ನು ವ್ಯಕ್ತಪಡಿಸುತ್ತಾರೆ. ಇಲ್ಲಿ ನೇರವಾಗಿ

ರಾಜಕೀಯವನ್ನು ಪ್ರಶ್ನಿಸುವ ಕವಿಯ ಆತ್ಮಸ್ಥೈರ್ಯ, ಎದೆಗಾರಿಕೆ ಪ್ರಶಂಸನೀಯ. ಐದು ವರ್ಷಕ್ಕೊಮ್ಮೆ ಬದಲಾಗುವ ರಾಜಕೀಯ ವ್ಯವಸ್ಥೆಯಲ್ಲಿ ಯಾರು ಅಧಿಕಾರದ ಚುಕ್ಕಾಣಿ ಹಿಡಿದರೂ ದಲಿತರ, ಬಡವರ, ಬದುಕು ಇದ್ದ ಹಾಗೆ ಇದೆ. ಸರ್ಕಾರ ಬದಲಾಗುತ್ತದೆಯೇ ಹೊರತು ಬಡವರ ಬಾಳು ಎಂದೆಂದೂ ಬದಲಾಗುವುದಿಲ್ಲ ಎನ್ನುವ ಮೂಲಕ ವರ್ತಮಾನದ ರಾಜಕೀಯ ಸಂದರ್ಭದ ವಿರುದ್ಧ ತಮ್ಮ ಅಸಹನೆಯನ್ನು ಹೊರಹಾಕಿದ್ದಾರೆ.

'ರಕ್ತ ಮತ್ತು ಹೋರಾಟ' ಎಂಬ ಕವಿತೆಯಲ್ಲಿ ಕವಿ ತನ್ನ ಕ್ರಾಂತಿಕಾರಿ ಗೆಳೆಯನ ಮನೆಗೆ ಹೋದ ಸಂದರ್ಭದಲ್ಲಿ ಆತನ ವೈಭವೋಪೇತ ಜೀವನಕಂಡು ಬೆರಗಾಗುತ್ತಾರೆ. ಮಾರ್ಕ್ಸ್‌ವಾದದ ಬಗ್ಗೆ ನಿರರ್ಗಳವಾಗಿ ಗಂಟೆಗಟ್ಟಲೆ ಮಾತನಾಡುವ ಆತನ ಬದುಕನ್ನು ಈ ರೀತಿಯಾಗಿ ತೆರೆದಿಡುತ್ತಾರೆ.

**"ನೋಡಿದೆ ಭವ್ಯ ಬಂಗಲೆ**
**ಏಳಂತಸ್ತಿನ ಸ್ವಂತ ಕಟ್ಟಡ**
**ಸುವರ್ಣಾಕ್ಷರದಲ್ಲಿ**
**ಕಂಗೊಳಿಸುತ್ತಿದ್ದ ನಾಮಫಲಕ**
**ಕರೆ ಕಂಟೆ ಬಾರಿಸಿದಾಗ**
**ಕಾವಲುಗಾರ ಬಾಗಿಲು ತೆಗೆದ**
**ಭವ್ಯ ಸ್ವಾಗತ ನೀಡಿದ**
**ಅಷ್ಟರಲ್ಲಿ ಒಳಗಿನಿಂದ ಗೆಳೆಯ ಬಂದ**
**ತನ್ನ ದೊಡ್ಡ ಎಸ್ಟೇಟ್ ಕಾರ್ಖಾನೆ**
**ಗದ್ದೆ ಮಿಲ್ಲಗಳ ಬಗ್ಗೆ ಹೆಮ್ಮೆಯಿಂದ ಬಣ್ಣಿಸಿದ"**

ಸಾಮಾನ್ಯ ಜನರ ಆರ್ಥಿಕ ಸಮಾನತೆಗಾಗಿ ದಿನವಿಡಿ ಗಂಟೆಗಟ್ಟಲೆ ಭಾಷಣ, ಹೋರಾಟ ಮಾಡುವ ಹೋರಾಟಗಾರರ ವೈಭವೋಪೇತ ಬದುಕಿನ ಚಿತ್ರಣವಿಲ್ಲಿದೆ. ಸಂಪತ್ತು ವಿಕೇಂದ್ರೀಕರಣಗೊಂಡಾಗ ಮಾತ್ರ ಸಾಮಾನ್ಯ ಜನರ ಬದುಕು ಹಸನಾಗುತ್ತದೆ. ಭಾರತದಂತಹ ರಾಷ್ಟ್ರದಲ್ಲಿ ಸಂಪತ್ತು ಕೆಲವೇ ಕೆಲವು ವ್ಯಕ್ತಿಗಳಲ್ಲಿ ಕೇಂದ್ರೀಕೃತವಾಗಿದೆ. ರಾಜಕೀಯ ವ್ಯವಸ್ಥೆಯಲ್ಲಿನ ಭ್ರಷ್ಟಾಚಾರ ಇದಕ್ಕೆ ಮುಖ್ಯ ಕಾರಣ. ಸಾಮಾನ್ಯ ಜನರ ವಂಚನೆ ಎಲ್ಲಾ ಕಾಲಕ್ಕೂ ನಡೆಯುತ್ತಲೇ ಇದೆ. ಜನರು ಎಚ್ಚತ್ತುಕೊಳ್ಳ ಬೇಕಾದ ಅನಿವಾರ್ಯತೆಯಿದೆ. ಸುಳ್ಳು ಮಾತುಗಳ ಮೂಲಕ ಜನಸಾಮಾನ್ಯರ ಹಿತೈಷಿಗಳಂತೆ ನಂಬಿಸಿ ತಮ್ಮ ಸ್ವಾರ್ಥ ಸಾಧಿಸಿಕೊಳ್ಳುತ್ತಿರುವವರ ಬೃಹತ್ ಜಾಲವೇ ಸೃಷ್ಟಿಯಾಗುತ್ತಿದೆ. ಇಂತವರಿಂದ ಜನರು ಜಾಗೃತರಾಗಬೇಕಾದ ಅನಿವಾರ್ಯತೆಯಿದೆ.

ಕಾರ್ಮಿಕರು ಮತ್ತು ಬಂಡಾಯ ಕವಿತೆಯಲ್ಲಿ ಇಂದಿನ ರಾಜಕಾರಣಿಗಳ ಕುರಿತ ವಿಡಂಬನೆಯಿದೆ. ನಾವು ಕಾರ್ಮಿಕ ಜನ ದುಡಿದು ತಿನ್ನುವ ಪ್ರಾಮಾಣಿಕ ಜನ ಎಂದು ಆರಂಭವಾಗುವ ಈ ಕವಿತೆ ರಾಜಕೀಯ ವ್ಯವಸ್ಥೆ ಸಮಾಜದಲ್ಲಿ ಸೃಷ್ಠಿಸುತ್ತಿರುವ ಕಲಹಗಳ ಚಿತ್ರಣವನ್ನು ಒಳಗೊಂಡಿದೆ.

**"ಇಲ್ಲದ್ದು ಇದೆಯೆಂದು**
**ಇದ್ದದ್ದು ಸುಳ್ಳೆಂದು**
**ಧರ್ಮ–ದೇವರುಗಳ ಹೆಸರಿನಲಿ**
**ಜಾತಿ–ಪಂಥಗಳ ಮುಸುಕಿನಲಿ**
**ಕಾಗದ ಪೆನ್ನುಗಳ ಮುಖಾಂತರ**
**ನಾವು**
**ಸುಲಿಗೆ ಮಾಡುವುದಿಲ್ಲ"**

ಧರ್ಮ ಮತ್ತು ಜಾತಿಗಳನ್ನು ಇಂದಿನ ರಾಜಕಾರಣಿಗಳು ತಮ್ಮ ರಾಜಕೀಯ ಸ್ವಾರ್ಥ ಸಾಧನೆಗೆ ಬಳಸಿಕೊಳ್ಳುತ್ತಿದ್ದಾರೆ. ಅವುಗಳನ್ನು ಅಸ್ತ್ರವನ್ನಾಗಿ ಬಳಸಿಕೊಂಡು ಜನಸಾಮಾನ್ಯರ ನಡುವೆ ಕಲಹ, ಕಂದರಗಳೇರ್ಪಡುವಂತೆ ಮಾಡಲಾಗುತ್ತಿದೆ. ತಮ್ಮ ಅಧಿಕಾರ ಬಲದಿಂದ ಕಾನೂನು, ಕಾಯ್ದೆಗಳನ್ನು ಬದಲಾಯಿಸುತ್ತಿದ್ದಾರೆ. ಆ ಮೂಲಕ ಜನರ ಸುಲಿಗೆಗೆ ಇಳಿದ ಇಂದಿನ ರಾಜಕೀಯ ಧುರಣರಿಗೆ ಕವಿ ಎಚ್ಚರಿಕೆಯನ್ನು ನೀಡುತ್ತಾರೆ.

**"ಅಧಿಕಾರ ಮದದಿಂದ**
**ಸಿರಿಹೊಂತಿಕೆಯ ಸೊಕ್ಕಿನಲ್ಲಿ**
**ನೊಂದ ಜನತೆಯನು**
**ಸುಲಿದು ತಿನ್ನುವವರಿಗೆ**
**ನಾವು ಪ್ರತಿಭಟಿಸುತ್ತೇವೆ."**

ಎನ್ನುವ ಮಾತಿನಲ್ಲಿ ಕವಿಯ ಬಂಡಾಯ ಮನೋಧೋರಣೆ ಎದ್ದು ಕಾಣುತ್ತದೆ. ಸಮಾಜದಲ್ಲಿ ಅನ್ಯಾಯ, ಅಕ್ರಮ, ಸುಲಿಗೆಗಳು ಹೆಚ್ಚಾದಾಗ ಕ್ರಾಂತಿ ತಾನಾಗಿಯೇ ಜನ್ಮ ತಳೆಯುತ್ತದೆ. ಚರಿತ್ರೆಯುದ್ದಕ್ಕೂ ಇಂತಹ ಅನೇಕ ಸಂಗತಿಗಳನ್ನು ನಾವು ಕಾಣುತ್ತೇವೆ. ಅಧಿಕಾರದ ಹೆಸರಿನಲ್ಲಿ ಸಾಮಾನ್ಯರ ಜನರನ್ನು ವಂಚಿಸುವವರನ್ನು 'ನಾವು ಪ್ರತಿಭಟಿಸುತ್ತೇವೆ' ಎನ್ನುವಲ್ಲಿ ಬದಲಾಗುತ್ತಿರುವ ಸಾಮಾಜಿಕ ವ್ಯವಸ್ಥೆಯ ಚಿತ್ರಣವಿದೆ,

**"ಬಾಹುಬಲಿಯ ಶಿಲಾಮೂರ್ತಿಗೆ**
**ಹಾಲಿನ ಅಭಿಷೇಕ ಮಾಡಿದರೆ**
**ಆ ಕಲ್ಲು ಹಾಲು ಕುಡಿದ ಬಲ್ಲುದೇನಯ್ಯಾ?**
**ಜೇನು ತುಪ್ಪವ ಸವರಿ**
**ಭಕ್ತಿಯಿಂದ ಕೈಮುಗಿದರೆ**
**ಆ ಕಲ್ಲು ಜೇನ ಸವಿಯ ಬಲ್ಲುದಯ್ಯಾ?**
**ಮಂತ್ರಿ ಮಾನ್ಯರೆಂಬುದವರೇ ಹೀಗೆ**
**ಹೆಲಿಕ್ಯಾಪ್ಟರ್‌ದಿಂದ ಹಾಲು ತುಪ್ಪ ಹನಿಸುವರಯ್ಯಾ**
**ಹಳ್ಳಿ ಹಳ್ಳಿಗಳಲ್ಲಿ ಜೀವಂತ ಬಾಹುಬಲಿಗಳು**
**ತುತ್ತು ಅನ್ನಕ್ಕಾಗಿ ತಿರುಗುವಾಗ**
**ಲಕ್ಷಗಟ್ಟಲೆ ಹಣವ ಖರ್ಚುಮಾಡಿ**
**ಜೇನು ತುಪ್ಪವ ಸುರಿವವರನೇನೆಂತೆನಯ್ಯಾ**
**ಸಬರದ ಬಸವಾ"**

ಜನರಲ್ಲಿ ವೈಜ್ಞಾನಿಕ ಮನೋಭಾವವನ್ನು ಬೆಳೆಸಬೇಕಾದ ಸರ್ಕಾರಗಳೇ ಮೂಢಭಕ್ತಿಯಲ್ಲಿ ಮುಳುಗಿರುವುದು ಅತ್ಯಂತ ಶೋಚನೀಯ ಸಂಗತಿ. ಜನಸಾಮಾನ್ಯರು ಒಂದು ತುತ್ತಿನ ಊಟಕ್ಕೂ ಪರಿತಪಿಸುವಾಗ ಕಲ್ಲಿನ ವಿಗ್ರಹಕ್ಕೆ ಹಾಲು–ತುಪ್ಪ–ಜೇನು ಸುರಿಯುತ್ತಿರುವ ಇಂದಿನ ರಾಜಕಾರಣಿಗಳ ಬಗ್ಗೆ ಕವಿಗೆ ಬೇಸರವಿದೆ. ಬಡತನ, ನಿರುದ್ಯೋಗದಂತಹ ಸಾಮಾಜಿಕ ಪಿಡುಗುಗಳು ಜನರನ್ನು ಕಾಡುತ್ತಿರುವಾಗ ಜನರ ಕಲ್ಯಾಣ ಮಾಡಬೇಕಾದ ಮಂತ್ರಿ ಮಾನ್ಯರು ಸಂಪತ್ತನ್ನು ಅವೈಜ್ಞಾನಿಕ ಆಚರಣೆಗೆ ವ್ಯಯ ಮಾಡುತ್ತಿರುವುದು ವ್ಯವಸ್ಥೆಯ ದುಃಸ್ಥಿತಿಗೆ ಕಾರಣವಾಗಿದೆ. ಮಂತ್ರಿ ಮಾನ್ಯರೆಂಬುವವರೇ ಹೀಗೆ ಹೆಲಿಕ್ಯಾಪ್ಟರ್‌ದಿಂದ ಹಾಲು–ತುಪ್ಪ ಹನಿಸುವರಯ್ಯಾ' ಎನ್ನುವ ಕವಿಮಾತಿನಲ್ಲಿ ವ್ಯವಸ್ಥೆಯ ವಿರುದ್ಧ ಅಸಹನೆಯಿದೆ. ಮೂಢನಂಬಿಕೆಯ ಆಚರಣೆ ಒಂದು ಕಡೆಯಾದರೆ, ಬಡವರ–ದಲಿತರ ಬದುಕಿನ ದುಸ್ಥಿತಿ ಮತ್ತೊಂದು ಕಡೆ ರಾಜಕಾರಣಿಗಳ ವಿಲಾಸ ಜೀವನ, ಹಣದ ಅಪವ್ಯಯದ ಮೊದಲಾದ ಸೂಕ್ಷ್ಮ

ಸಂಗತಿಗಳನ್ನು ಹಿಡಿದಿಟ್ಟಿರುವ ಈ ವಚನ ಇಂದಿನ ಸಾಮಾಜಿಕ, ರಾಜಕೀಯ, ಧಾರ್ಮಿಕ ವ್ಯವಸ್ಥೆಯಲ್ಲಿ ಅತ್ಯಂತ ಪ್ರಸ್ತುತ ವೆನಿಸುತ್ತದೆ.

ಒಟ್ಟಾರೆ ಹೀಗೆ ಸಬರದ ಅವರ ಕವಿತೆಗಳದ್ದಕ್ಕೂ ಪ್ರಸ್ತುತ ಸಾಮಾಜಿಕ, ರಾಜಕೀಯ ಮೊದಲಾದ ಸ್ಥಿತಿಗತಿಗಳ ಬಗ್ಗೆ ಆಕ್ರೋಶದ ದನಿಯಿದೆ. ಅಲ್ಲಿನ ಮೋಸ, ವಂಚನೆ, ಅನ್ಯಾಯ, ಸ್ವಾರ್ಥ ಸಾಧನೆಗಳ ಬಗ್ಗೆ ಕವಿ ವಿಷಾದಿಸಿದ್ದಾರೆ. ವಾಸ್ತವ ರಾಜಕೀಯ ಅವಗುಣಗಳನ್ನು ಪ್ರಶ್ನಿಸುವ ಮೂಲಕ ಜನಸಾಮಾನ್ಯರ ನೋವು–ಸಂಕಟಗಳನ್ನು ತೆರೆದಿಟ್ಟಿದ್ದಾರೆ. ವ್ಯಕ್ತಿ ಮತ್ತು ಸಮಾಜದ ಆರೋಗ್ಯವೇ ಸಬರದ ಅವರ ಕಾವ್ಯದ ಬಹುಮುಖ್ಯ ಕಾಳಜಿ. ದೇಶದ ಅಭದ್ರತೆಯನ್ನು ಕುರಿತ ನೋವು ಇವರಲ್ಲಿ ದಟ್ಟವಾಗಿ ಕಾಡಿದೆ. ಸಮಾಜದ ಬದುಕಿಗೆ ರಾಹುಗ್ರಸ್ತವಾಗಿ ಬಂದೊದಗುವ ಕೆಲವು ರಾಜಕೀಯ ಗೋಸುಂಬೆಗಳನ್ನು ತೀಕ್ಷ್ಣವಾಗಿ ವ್ಯಂಗ್ಯ ವಿಡಂಬನೆಗಳ ಮೂಲಕ ಅಲ್ಲಗಳೆದಿದ್ದಾರೆ. ವಾಸ್ತವ ಸಮಾಜದಲ್ಲಿ ಇವರ ಕಾವ್ಯಗಳು ತುಂಬಾ ಪ್ರಸ್ತುತವೆನಿಸುತ್ತವೆ ಮತ್ತು ಮಾರ್ಗೋಪಾಯಗಳಾಗಿ ಗಮನ ಸೆಳೆಯುತ್ತವೆ.

## ಆಕರ ಗ್ರಂಥಗಳು


೧. ಹೋರಾಟ ಯುಗಧ್ವನಿ ಪ್ರಕಾಶನ, ಧಾರವಾಡ, ೧೯೭೬

೨. ನನ್ನವರ ಹಾಡು : ಪಲ್ಲವಿ ಪ್ರಕಾಶನ, ಬೀದರ, ೧೯೭೬

೩. ಮೂಡಲಕ ಕೆಂಪು ಮೂಡ್ಯಾವ : ಪಲ್ಲವಿ ಪ್ರಕಾಶನ, ಬೀದರ, ೧೯೮೪

೪. ನೂರು ಹನಿಗಳು : ಗ್ರಿನೋಬಲ್ಸ್ ಪ್ರಕಾಶನ, ಗುಲಬರ್ಗಾ, ೧೯೮೮

೫. ದನಿಯೆತ್ತಿ ಹಾಡೇನ : ಸ್ವಯಂಜ್ಯೋತಿ ಪ್ರಕಾಶನ, ಗುಲಬರ್ಗಾ, ೧೯೯೦

೬. ಬೆಳದಿಂಗಳು ಬಿಸಿಲಾಯಿತು : ವಿದ್ಯಾನಿಧಿ ಪ್ರಕಾಶನ, ಗದಗ, ೧೯೯೪

೭. ಸಬರದ ಕವಿತೆಗಳು : ಕನ್ನಡ ಪುಸ್ತಕಪ್ರಾಧಿಕಾರ, ಬೆಂಗಳೂರು, ೨೦೦೦

೮. ಕೆಂಡ ಸಂಪಿಗೆ : ಪಲ್ಲವಿ ಪ್ರಕಾಶನ, ಬೀದರ, ೨೦೦೦

೯. ಬಸರದ ಬಸವನ ವಚನಗಳು : ಸಿರವರ ಪ್ರಕಾಶನ, ಬೆಂಗಳೂರು, ೨೦೧೫


## ಪರಾಮರ್ಶನ ಗ್ರಂಥಗಳು


೧. ಕೇಶವಶರ್ಮ ಕೆ : ಮಾರ್ಕ್ಸ್‌ವಾದಿ ಸಾಹಿತ್ಯ ವಿಮರ್ಶೆ ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾನಿಲಯ, ಹಂಪಿ, ಬಳ್ಳಾರಿ, ೨೦೧೧.

೨. ಗುರುನಾಥ ಎಸ್.ಆರ್. : ಶೋಷಿತ ಜಗತ್ತು, ಸಮಾಜ, ಸಂಸ್ಕೃತಿ ವಿಚಾರ, ನವಕರ್ನಾಟಕ ಪ್ರಕಾಶನ, ಬೆಂಗಳೂರು, ೨೦೧೫.

೩. ಡಾ. ವಿಜಯಶ್ರೀ ಸಬರದ (ಸಂಪಾದಕರು) : ನಡೆದದ್ದೇ ದಾರಿ ಪಲ್ಲವಿ ಪ್ರಕಾಶನ, ಕಲಬುರಗಿ, ೨೦೧೫.

೪. ಪ್ರಹ್ಲಾದ ಅಗಸನಕಟ್ಟೆ : ದಲಿತ–ಬಂಡಾಯ ಕಾವ್ಯ ಮತ್ತು ವಿಚಾರವಾದಗಳು
ಹರ್ಷ ಪ್ರಕಾಶನ, ಹುಬ್ಬಳ್ಳಿ, ೨೦೦೪.

೫. ಪ್ರೊ. ಎಚ್.ಟಿ. ಪೋತೆ (ಸಂಪಾದಕರು) : ಸಬರದ ಸಾಹಿತ್ಯ ಸಮೀಕ್ಷೆ
ಸಿದ್ಧಲಿಂಗೇಶ್ವರ ಪ್ರಕಾಶನ, ಕಲಬುರಗಿ, ೨೦೧೭.

೬. ಬರಗೂರು ರಾಮಚಂದ್ರಪ್ಪ : ಬಂಡಾಯ ಸಾಹಿತ್ಯ ಮೀಮಾಂಸೆ
ಅನ್ವೇಷಣ ಪ್ರಕಾಶನ, ಬೆಂಗಳೂರು, ೧೯೯೦.

೭. ಬರಗೂರು ರಾಮಚಂದ್ರಪ್ಪ : ಸಾಹಿತ್ಯ ಮತ್ತು ರಾಜಕಾರಣ,
ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು,
ದ್ವಿತೀಯ ಮುದ್ರಣ, ೧೯೯೮,

೮. ಬಸವರಾಜ ಸಬರದ (ಸಂ.) : ಬಂಡಾಯ ಸಾಹಿತ್ಯದ ತಾತ್ವಿಕ ನೆಲೆಗಳು
ಕರ್ನಾಟಕ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೯೨.

೯. ಶಿವರುದ್ರಪ್ಪ ಜಿ.ಎಸ್. (ಸಂ.) : ಕನ್ನಡ ಸಾಹಿತ್ಯ ಮತ್ತು ಪ್ರತಿಭಟನೆ
ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೧೯೮೯.

೧೦. ಶಿವಾನಂದ ಕೆಳಗಿನಮನಿ (ಪ್ರ.ಸಂ.) : ಬಂಡಾಯ ಸಾಹಿತ್ಯ,
ಚೇತನ ಬುಕ್ ಹೌಸ್, ಮೈಸೂರು.

೧೧. ಸಬಿಹಾ ಭೂಮಿಗೌಡ : ಸಾಹಿತ್ಯದ ಸಂಘರ್ಷದ ನೆಲೆಗಳು
ಪ್ರಸಾರಾಂಗ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ, ೨೦೧೧.

೧೨. ಸರಜೂ ಕಾಟ್ಕರ್ (ಸಂ.) : ಕನ್ನಡ ಬಂಡಾಯ ಸಾಹಿತ್ಯ
ಸಾಹಿತ್ಯ ಅಕಾಡೆಮಿ, ನವದೆಹಲಿ.